ಶ್ರೀ ಜಿ. ರಾಜುಗೌಡ.—ಬಗರ್ ಹುಕುಂನಲ್ಲಿ ಸಾಗುವಳಿ ಮಾಡತಕ್ಕ ರೈತರಿಗೆ ಮತ್ತು ಅತಿಕ್ರಮವಾಗಿ ಸರ್ಕಾರಿ ಜಮೀನನ್ನು ಸಾಗುವಳಿ ಮಾಡತಕ್ಕವರಿಗೆ ಇತ್ತೀಚೆಗೆ ಅವರ ಹೆಸರಿನಲ್ಲಿ ಖಾತೆಯನ್ನು ಕೊಡಬಾರದು ಎಂದು ಹೇಳಿದ್ದಾರೆ. ಆದರೆ ಕಾನೂನು ಪ್ರಕಾರ ಜಮೀನನ್ನು ಪಡೆಯಲು ಅರ್ಹತೆಯಿರತಕ್ಕವರಿಗೂ ತಮ್ಮ ಈ ಒಂದು ಸುತ್ತೋಲೆಯಿಂದ ತೊಂದರೆಯಾಗುವುದಿಲ್ಲವೆ ? ತಮ್ಮ ಈ ಸುತ್ತೋಲೆಯನ್ನು ಯಾವಾಗ ಸರಿಪಡಿಸುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ನಾವು ಹೊರಡಿಸಿರತಕ್ಕ ಆಜ್ಞೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ಕಾಣುತ್ತದೆ. ೧೯೮೯ ಸೆಪ್ಟೆಂಬರ್ ೧೯೭೭ರ ಸುತ್ತೋಲೆಯ ಪ್ರಕಾರ ಯಾರು ಯಾರು ಬಗರ್‌ಹುಕುಂನಲ್ಲಿ ಸಾಗುವಳಿ ಮಾಡಿಕೊಂಡಿದ್ದಾರೆಯೋ, ಅವರಿಗೆ ನಿಮ್ಮ ತಾಲ್ಲೂಕಿನಲ್ಲಿಯೂ ಸಾಗುವಳಿ ಚೀಟಿಯನ್ನು ಕೊಟ್ಟಿದ್ದೇವೆ. ಈ ಸಂಬಂಧದಲ್ಲಿ ರೆಕಾರ್ಡ್ಸ್ ವಿಲೇವಾರಿ ಮಾಡಲಿಕ್ಕೆ ನಮ್ಮಿದೇನೂ ಅಭ್ಯಂತರವಿಲ್ಲ. ಹೊಸದಾಗಿ ಸುತ್ತೋಲೆಯ ಪ್ರಕಾರ ಯಾರು ಯಾರು ಸಾಗುವಳಿ ಮಾಡಿಕೊಂಡಿದ್ದಾರೆ ಅಂಥವರಿಗೆ ಸಾಗುವಳಿ ಚೀಟಿಯನ್ನು ಕೊಡುವುದಿಲ್ಲವೆಂದು ಹೇಳಿದ್ದೇವೆ.

Krishna water dispute

373 Sri S.M. Sheeranaly Chandrsheka (Hosanagar)

Will the Cheif Minister be pleased to state :

(a) whether any award has been passed by the Commission appointed by the Government of India to resolve the sharing of Krishna water Dispute ;

(b) if so, the quantity of water allocated to Karnataka State ;

(c) whether there is any hurdle now to take up the Upper Tunga and Upper Bhadra Projects ;

(d) if so, what is the hurdle ;

(e) whether the Government intend to take up this work which is of very great importance ?

SRI N. BASAVAIAH.—(Minister of state for Major Irrigation) [on behalf of) ; SRI D. DEVARAJ URS (Chief Minister)]

(a) Yes. The Tribunal has given its decision.

(b) (i) 700 TMC out of 75% dependable flow of 2060 TMC of the river Krishna.

(ii) 34 TMC out of regenerated waters.

(c) No.

(d) Does not arise in view of reply to question (c) above.

(e) Yes, after the investigations are finalised and the project is got sanctioned.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಕೃಷ್ಣ ಯೋಜನೆಯ ಡಿಸ್ಪ್ಯೂಟ್ ಬಗ್ಗೆ ತೀರ್ಮಾನ ಕೊಟ್ಟು ಎಷ್ಟು ವರ್ಷವಾಯಿತು.

† ಶ್ರೀ ಎನ್. ಬಸವಯ್ಯ.—ತೀರ್ಮಾನ ಕೊಟ್ಟಿದ್ದುದು ೨೭ನೇ ಮೇ ೧೯೭೪ ರಂದು.

SRI G. B. SHANKAR RAO.—Bef re the Hon. Minister replies, I want to make a request. This i- a very important question. The award has been given no doubt but t. is question can be reopened by about 2000 A.D. I am not questioning the compentency of the Hon. Minister to reply. Supposing son ething is answered there will be far-reaching implications on the right of our State to get additional water by about 2000 A.D. Then we will be in trouble. So, I request the Hon. Speaker to defer this question so that the Chief Minister may answer after being posted with full fa' ts about the award.

SRI S.M. SHEERANALI CHANDRASEKHAR :—I have no objection if the Hon, Speaker were to hold over the question.

MR. SPEAKER. - The hon. members may please put supplementaries and elicit information from the Hon.Minister.

ಶ್ರೀ ಎಸ್ ಎಂ. ಶೀರ್ನಾಳಿ ಚಂದ್ರಶೇಖರ್.—ನಾವು ಅಪ್ಪರ್ ತುಂಗ, ಅಪ್ಪರ್ ಭದ್ರ ಪ್ರೊಜೆಕ್ಟ್ ಗಳಿಗೆ ಅರ್ಜಿ ಮಾಡುವ ಉದ್ದೇಶದಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಕೃಷ್ಣ ಯೋಜನೆಯ ವಿವಾದದಲ್ಲಿ ತೀರ್ಪು ಕೊಟ್ಟು ೨-೩ ವರ್ಷವಾಗಿದ್ದರೂ ಮೇಲ್ಕಂಡಿಯ ಯೋಜನೆಗಳನ್ನು ತೆಗೆದು ಕೊಳ್ಳುವುದರಲ್ಲಿ ಏಕೆ ತಡವಾಗಿದೆ ?

ಶ್ರೀ ಎನ್. ಬಸವಯ್ಯ.—ತೀರ್ಮಾನವಾದ ಮೇಲೆ ನಾವು ಇದಕ್ಕೆ ಸಂಬಂಧಪಟ್ಟಂತೆ ಮಾಸ್ಟರ್ ಪ್ಲಾನ್‌ನ್ನು ತಯಾರು ಮಾಡಬೇಕು. ಮಾಸ್ಟರ್ ಪ್ಲಾನ್ ಆದಮೇಲೆ ಪ್ರಾಜೆಕ್ಟ್ ಪ್ಲಾನ್‌ನ್ನು ತಯಾರು ಮಾಡಬೇಕು. ಇದಕ್ಕೆ ಆರನೆಯ ಯೋಜನೆಯ ಕಡೆಯ ಭಾಗದಲ್ಲಿ ದುಡ್ಡಿನ ಅನುಕೂಲತೆಯನ್ನು ನೋಡಿಕೊಂಡು ಸರಿಯಾದಂಥ ಒಂದು ಸ್ಕೀಂನ್ನು ಹಾಕಿಕೊಳ್ಳುವುದಕ್ಕೆ ಸರ್ಕಾರ ಖಂಡಿತವಾಗಿಯೂ ಪ್ರಯತ್ನ ಮಾಡುತ್ತದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಇದೇ ಉತ್ತರವನ್ನು ನಾನು ಹಿಂದೆ ಪ್ರಶ್ನೆ ಕೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದರು. ಅವರು ಈ ಯೋಜನೆಗಳನ್ನು ಕೈಗೊಳ್ಳಲಿಕ್ಕೆ ಒಂದು-ಒಂದೂವರೆ ವರ್ಷಗಳು ಬೇಕಾಗಬಹುದು ಎಂದು ಹೇಳಿದ್ದರು. ಈಗಾಗಲೇ ಎರಡು ವರ್ಷ ಗಳಾಗಿವೆ, ಇನ್ನೂ ಈ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ನಿಧಾನವಾಡುತ್ತಿರುವುದಕ್ಕೆ ಕಾರಣ ಏನು ?

ಶ್ರೀ ಎನ್ .ಬಸವಯ್ಯ.—ಈಗಾಗಲೇ ನಾನು ಹೇಳಿದ ಹಾಗೆ, ಇದಕ್ಕೆನಾವು ಮಾಸ್ಟರ್ ಪ್ಲಾನನ್ನು ತಯಾರು ಮಾಡಬೇಕಾಗಿದೆ. ಮಾಸ್ಟರ್ ಪ್ಲಾನ್ ರೆಡಿ ಆದತಕ್ಷಣ ಪ್ರಾಜೆಕ್ಟ್ ಪ್ಲಾನ್‌ನ್ನು ರೆಡಿ ಮಾಡ ಬೇಕಾಗುತ್ತದೆ. ಇದಾದನಂತರ ಇದಕ್ಕೆ ಎಷ್ಟು ಹಣ ಬೇಕಾಗಬಹುದು ಎನ್ನುವುದನ್ನು ನಾವು ಅಂದಾಜು ಮಾಡಬೇಕಾಗುತ್ತದೆ ಇದಕ್ಕೆ ಯಾವರೀತಿಯಾಗಿ ನಾವು ಹಣವನ್ನು ಒದಗಿಸಬೇಕು, ನಮ್ಮ ಸರ್ಕಾರ ದವರು ಇದಕ್ಕೆ ಎಷ್ಟು ಕೊಡಬೇಕು ಎನ್ನುವುದನ್ನು ಪರಿಶೀಲನೆ ಮಾಡಿ, ಈ ಯೋಜನೆಗಳನ್ನು ತೆಗೆದುಕೊಳ್ಳಲು ಸರ್ಕಾರ ಮನಸ್ಸು ಮಾಡಲಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಾನು ಈ ರೀತಿಯ ಉತ್ತರ ಬರಬಹುದು ಎಂದು ವಿರೀಕ್ಷೆ ಮಾಡಿಯೇ ಇದನ್ನು ಪೆಲ್ಡ್ ಓವರ್ ಮಾಡಿ ಎಂದು ಹೇಳಿದ್ದುದು. ಕಳೆದ ಶಾಸನ ಸಭೆಯಲ್ಲಿ ಇದೇ ರೀತಿಯ ಉತ್ತರವನ್ನು ಕೊಡಲಾಗಿದೆ.

ಶ್ರೀ ಎನ್. ಬಸವಯ್ಯ —ಆದಷ್ಟು ಶೀಘ್ರವಾಗಿ ಇದರ ಬಗ್ಗೆ ಮಾಸ್ಟರ್ ಪ್ಲಾನ್‌ನ್ನು ತಯಾರು ಮಾಡಲಿಕ್ಕೆ ಪ್ರಯತ್ನ ಮಾಡೋಣ. ಈ ಪ್ರಶ್ನೆಯನ್ನು ತಡೆಹಿಡಿಯತಕ್ಕ ಪ್ರಮೇಯವೇನೂ ಇಲ್ಲ. ಆದಷ್ಟು ಬೇಗ ಮಾಸ್ಟರ್ ಪ್ಲಾನನ್ನು ತಯಾರು ಮಾಡಲು ನಮ್ಮ ಅಧಿಕಾರಿಗಳಿಗೂ ಆಜ್ಞೆ ಮಾಡಲಾಗು ತ್ತದೆ. ಖಂಡಿತವಾಗಿಯೂ ಸರ್ಕಾರದವರು ಇದರ ಬಗ್ಗೆ ಮಾಸ್ಟರ್ ಪ್ಲಾನ್‌ನ್ನು ಆದಷ್ಟು ಬೇಗ ತಯಾರು ಮಾಡಿಸಿ ಕೆಲಸ ಮಾಡಲಿಕ್ಕೆ ಮನಸ್ಸು ಮಾಡುತ್ತೇವೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ.—ನೀರಾವರಿ ಯೋಜನೆಗಳ ವಿಷಯದಲ್ಲಿ ಬಹಳ ಪ್ರಾಮುಖ್ಯವಾದ ಅಂಶ ಅಡಕವಾಗಿರುತ್ತದೆ. ಇದನ್ನು ನಾವು ಕಳೆದ ೨೦ ವರ್ಷಗಳಿಂದಲೂ ನೋಡಿಕೊಂಡು ಬಂದಿದೆ. ಈ ಯೋಜನೆಗಳು ತಡವಾದಷ್ಟು ನಮಗೆ ದ್ರೋಹವಾಗುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಪರ್ಷಾನುಗಟ್ಟಲೆ ಯಾರು ನೀರನ್ನು ಉಪಯೋಗಿಸಿಕೊಳ್ಳುತ್ತಾರೆಯೋ ಅವರಿಗೆ ವಾಟರ್ ರೈಟ್ ಬರುತ್ತದೆ. ಆಮೇಲೆ ನಮಗೆ ನೀರು ಉಳಿಯುವುದಿಲ್ಲ. ತಾವು ಅಂತ ವನ್ನು ಗಮನದಲ್ಲಿಟ್ಟುಕೊಂಡು ಈ ವರ್ಷದಲ್ಲಿ ಇದಕ್ಕೆ ಮಾಸ್ಟರ್ ಪ್ಲಾನ್ ಇತ್ಯಾದಿಗಳನ್ನು ತಯಾರು ಮಾಡಿ ಕೆಲಸ ಮಾಡಲಿಕ್ಕೆ ಮನಸ್ಸು ಮಾಡುತ್ತೀರಾ ? ಇದೇ ರೀತಿಯಲ್ಲಿ ನಮ್ಮ ರಾಜ್ಯದವರಂ ಹೇಮಾವತಿ ಯೋಜನೆಗೆ ಕೇಂದ್ರ ಸರ್ಕಾರದವರ ಒಪ್ಪಿಗೆಯನ್ನು ನಿರೀಕ್ಷಣೆ ಮಾಡಿ ಆದು ಬರುವುದಕ್ಕೆ ಮುಂಚೆಯೇ ನಮ್ಮ ಆರ್ಧ ಯೋಜನೆ ಮುಗಿದು ಹೋಗಿತ್ತು. ಈಗ ತಾವುಗಳು ಕೃಷ್ಣ ಮೇಲ್ದಂಡೆಯ ಯೋಜನೆಗಳಿಗೆ ಸಮಸ್ತ ತಾಂತ್ರಿಕ ಅಂಶದ ಒಪ್ಪಿಗೆಯನ್ನು ಪಡೆದು ತದನಂತರ ಕೆಲಸ ಮಾಡುತ್ತೇವೆಂದು ಹೇಳುವುದಾದರೆ, ಉತ್ತರ ಕರ್ನಾಟಕಕ್ಕೆ ದ್ರೋಹ ಮಾಡಿದಂತಾಗುತ್ತದೆ ಎನ್ನುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಬಸವಯ್ಯ.—ನ್ಯಾಯಾಧೀಕರಣವು ತೀರ್ಪನ್ನು ಕೊಟ್ಟಮೇಲೆ ಆದರಲ್ಲಿ ಸ್ಪಷ್ಟವಾಗಿ ಕರ್ನಾಟಕಕ್ಕೆ ೫೦ ಪರ್ಸೆಂಟ್ ಸರ್ಪ್ಲಸ್ ವಾಟರ್ ಬರಬೇಕು ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ರಾಮಸ್ವಾಮಿಯವರು ಕೊಟ್ಟಿಂಥ ಸಲಹೆ ಗಮನಾರ್ಹವಾದುದು. ಇದರ ಬಗ್ಗೆ ಇನ್ನೂ ಹೆಚ್ಚಿನ ಅವಕಾಶವನ್ನು ತೆಗೆದುಕೊಳ್ಳದೆ ಒಂದೆರಡು ವರ್ಷದಲ್ಲಿ ಖಂಡಿತವಾಗಿಯೂ ಒಂದು ಹನಿ ನೀರನ್ನೂ ವೇಸ್ಟ ಮಾಡದಂತೆ ಕೆಲಸಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಇದೇ ರೀತಿಯಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದರು. ವರ್ಷಗಳು ಕಳೆದ ಹಾಗೆ, ಕಾಸ್ಟ್ ಆಫ್ ಕನ್ಸ್ಟ್ರಕ್ಷನ್ ಸಹ ಜಾಸ್ತಿಯಾಗುತ್ತಾ ಹೋಗುತ್ತದೆ. ಇಪತ್ತು ನೂರು ಕೋಟಿ ರೂಪಾಯಿಗಳ ಪ್ರಾಜೆಕ್ಟ ಇದ್ದುದು ನಾಳೆ ೧೫೦ ಕೋಟಿ ರೂಪಾಯಿಗಳಾಗಬಹುದು. ಆದ್ದರಿಂದ ತಾವು ಆರು ತಿಂಗಳೊಳಗೆ ತೀರ್ಮಾನಿಸಿ ಏನಾದರೂ ಒಂದು ಪರಿಹಾರವನ್ನು ತರಿಸಿಕೊಂಡು ಈ ಕೆಲಸಗಳನ್ನು ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಬಸವಯ್ಯ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಮಂತ್ರಿಗಳು ಈಗಿರುವ ಕೃಷ್ಣ ಮೇಲ್ದಂಡೆಯಲ್ಲಿ ಎಷ್ಟು ನೀರಾವರಿ ಯೋಜನೆಗಳನ್ನು ಕೈಗೊಳ್ಳಬಹುದು ಎನ್ನುವುದರ ಬಗ್ಗೆ ಒಂದು ಅಂದಾಜನ್ನೇನಾದರೂ ಮಾಡಿದ್ದಾರೆಯೆ ? ಕೃಷ್ಣ ಅವಾರ್ಡನಿಂದ ನಮಗೆ ಸಿಕ್ಕತಕ್ಕ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಿಕ್ಕೆ ಮತ್ತು ೨೦೦೦ ಶತಮಾನದ ಪೂರ್ವದಲ್ಲಿ ಇದರಿಂದಾಗುವ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೆ ಯೋಜನೆಗಳನ್ನು ತಯಾರು ಮಾಡಿಟ್ಟುಕೊಂಡಿದ್ದಾರೆಯೇ ಇವುಗಳ ಬಿಡ್ರ್ಸು ಏಷ್ಟು ಬರಬಹುದು ?

ಶ್ರೀ ಎನ್. ಬಸವಯ್ಯ.—ಇದಕ್ಕೆ ಮಾನ್ಯ ಸದಸ್ಯರು ಪ್ರತ್ಯೇಕವಾಗಿ ನೋಟೀಸ್ ಕಳುಹಿಸಿದರೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

QUESTION FOR ANSWERS ON THE DAY
(but not taken up)

Jayanti Villages in Taluks of Chitradurga District

72. SRI V. MASIYAPPA (Chitradurga).—Will the Minister for Rural Development and Panchayathi Raj be pleased to state :—

(a) the number and names of the villages included in the Jayanthi village scheme in the Taluks of Chitradurga district ;